ದಿನಾಂಕಃ 13.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ವಾದಿಯು ಮಾಕೋನಹಳ್ಳಿ ಮತ್ತು ಬೆಂಗಳೂರು ಎರಡೂ ಕಡೆ ವಾಸವಿದ್ದಾರೆ. ಮಾಕೋನಹಳ್ಳಿಯ ಸ.ನಂ.416/2 ರಲ್ಲಿ ವಾದಿಯ ಮನೆ ಇರುತ್ತದೆ. ವಾದಿಯ ಮನೆಯಿಂದ ನಮ್ಮ ಮನೆಗೆ ಸುಮಾರು 1 ಕಿ.ಮೀ ಅಂತರವಿದೆ. ಸ.ನಂ.416/2 ರಲ್ಲಿ ವಾದಿಗೆ 1 ಎಕರೆ ಜಮೀನಿರುತ್ತದೆ ಮತ್ತು ಸ.ನಂ.306 ರಲ್ಲಿ 5 ಎಕರೆ ಕಾಫೀ ತೋಟವಿದೆ. ಸದರಿ ಎರಡೂ ಸ.ನಂ. ನ ಸ್ವತ್ತು ವಾದಿಯ ಹೆಸರಿನಲ್ಲಿರುತ್ತದೆ. ವಾದಿಯು ವಾಸಿಸುತ್ತಿರುವ ಮನೆ ಸುಮಾರು 25 ವರ್ಷ ಹಳೆಯ ಮನೆಯಾಗಿರುತ್ತದೆ. ಪ್ರಸ್ತುತವಾಗಿ ವಾದಿಯ ತಾಯಿ ಸದರಿ ಮನೆಯಲ್ಲಿ ವಾಸಿಸುತ್ತಿರುತ್ತಾರೆ. ಸ.ನಂ.416/2 ಮತ್ತು ಸ.ನಂ.306 ರ ಪೂರ್ವ ದಿಕ್ಕಿಗೆ ನಮ್ಮ ಜಮೀನಿರುತ್ತದೆ. ನನ್ನ ಪ್ರಮಾಣ ಪತ್ರಿಕೆಯಲ್ಲಿ ಇರುವ ಅಂಶಗಳನ್ನು ನಾನೇ ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಸ.ನಂ.306 ರ ಜಮೀನು ಸರ್ಕಾರಿ ಜಮೀನಾಗಿರುತ್ತದೆ. ಸದರಿ ಜಮೀನಿನ ಪಹಣಿಯನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ಜಮೀನನ್ನು ಮಂಜೂರು ಕೋರಿ ವಾದಿಯವರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸ.ನಂ.306 ರಲ್ಲಿ ಆಂತೋರಿಯಂ ಪ್ಲಾಂಟ್ ಇರುತ್ತದೆ.

ಸ.ನಂ.416/2 ರಲ್ಲಿ ಮನೆ, ರೈಟರ್ ಕ್ವಾರ್ಟರ್ಸ್, ಆಂತೋರಿಯಂ ಪ್ಲಾಂಟ್, ಕಾಫೀ ಕಣ ಮತ್ತು ಆಂತೋರಿಯಂ ಪ್ಲಾಂಟ್‌ಗಳ ಉಪಕರಣಗಳನ್ನು ಶೇಕರಿಸಿ ಇಡುವಂತಹ ಶೆಡ್‌ಗಳು ಇವೆ. ಸದರಿ ಸ.ನಂ. ನಲ್ಲಿ ಆಂತೋರಿಯಂ ಪ್ಲಾಂಟ್ ಒಟ್ಟು 5 ಎಕರೆ ವಿಸ್ತೀರ್ಣವಿದೆ. ಕಾಫೀ ಕಣ ಒಂದು ಎಕರೆ ವಿಸ್ತೀರ್ಣವಿದೆ. ವಾದಿಯು ವಾಸಿಸುತ್ತಿರುವ ಮನೆ ಹಂಚು ಮತ್ತು RCC ಯದ್ದಾಗಿರುತ್ತದೆ. ಸದರಿ ವಿಷಯವನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಮಂಜೂರು ಕೋರಿ ಸಲ್ಲಿಸಿದ ಅರ್ಜಿಯನ್ನು ವಾದಿಯು ನನಗೆ ತೋರಿಸಿರುವುದಿಲ್ಲ. ವಾದಿಯ ಮನೆಯ ಸಂಬಂಧಿಸಿದ ದಾಖಲಾತಿಯನ್ನು ನಾನು ವಾದಿಯ ಬಳಿ ಕೇಳಿರುವುದಿಲ್ಲ. ಸಾಮನ್ಯಾವಾಗಿ ಕಾಫೀ ಕಣ ಎಂಬುದನ್ನು ಪಹಣಿಯಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ವಾದಿಗೆ ಬೆಂಗಳೂರಿನಲ್ಲಿ ಇರುವಂತಹ ಕಛೇರಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸ.ನಂ.416/2 ರ ಕಂದಾಯ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಕಳೆದ 4 ವರ್ಷದ ಹಿಂದೆ ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ವಿಭಾಗವಾಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ವಿಷಯವನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ.

ನಾವು ಆಜು ಬಾಜುದಾರರಾದ ಕಾರಣ ಸದರಿ ವಿಭಾಗವಾದ ವಿಚಾರವು ನನಗೆ ತಿಳಿದಿರುತ್ತದೆ. ಪ್ರತಿವಾದಿಯವರು ಜಮೀನಿನ ಸ.ನಂ. ನನಗೆ ತಿಳಿದಿರುವುದಿಲ್ಲ. 1 ನೇ ಪ್ರತಿವಾದಿಯವರು ಮನೆಯ ಕುರಿತು ನನಗೆ ತಿಳಿದಿರುವುದಿಲ್ಲ. 2 ನೇ ಪ್ರತಿವಾದಿಯವರು ಮಾಕೋನಹಳ್ಳಿಯಲ್ಲಿ ವಾಸವಿರುತ್ತಾರೆ. ನಾನು ನನ್ನ ವಕೀಲರಿಗೆ ಪ್ರತಿವಾದಿಯವರು ಜಮೀನಿನ

ಕುರಿತು ಯಾವುದೇ ಮಾಹಿತಿಯನ್ನು ತಿಳಿಸಿರುವುದಿಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯ್ತಿ ಇಂದ ನೀರಿನ ಟ್ಯಾಂಕನ್ನು ಅಳವಡಿಸಿದ ಕುರಿತು 1 ನೇ ಪ್ರತಿವಾದಿಯ ವಿರುದ್ದ ನಾನು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಮೂಡಿಗೆರೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿತ್ತು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ 2002 ನೇ ಇಸವಿಯಿಂದ ಒಳ್ಳೆ ಬಾಂಧವ್ಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಯ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ವಾದಿಯವರ ಪ್ರಭಾವದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸ.ನಂ.416/3 ರಲ್ಲಿ ಜಮೀನಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿಗಳು ಆಂತೋರಿಯಂ ಪ್ಲಾಂಟ್ ಮಾಡಿಕೊಂಡು ಅದರ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ವಾದಿಯು 07.09.2019 ರಂದು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಕೆಲವು ವರ್ಷಗಳಿಂದ ಇತರರಿಗೂ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರುತ್ತಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಾವಾ ಸ್ವತ್ತು ಮತ್ತು ಆಂತೋರಿಯಂ ಪ್ಲಾಂಟ್ ವಾದಿಯ ಸ್ವಾಧೀನಾನುಬವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.